ಅ) ಕಳೆದ ಮೂರು ವರ್ಷಗಳಿಂದ ಅಂದರೆ, 1994-95 ರಿಂದ 1996-97ನೇ ಸಾಲಿನ ವರೆಗೆ 101 ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ ಮತ್ತು 49 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ತೆರೆಯಲಾಗಿದೆ. ಇವುಗಳ ಪೈಕಿ 145 ವಿದ್ಯಾರ್ಥಿನಿಲಯಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿವೆ. ಒಂದು ವಿದ್ಯಾರ್ಥಿನಿಲಯಕ್ಕೆ ಸ್ವಂತ ಕಟ್ಟಡ ನಿರ್ಮಾಣವಾಗಿದೆ. ನಾಲ್ಕು ವಿದ್ಯಾರ್ಥಿನಿಲಯಗಳು ಉಚಿತ ಕಟ್ಟಡದಲ್ಲಿ ನಡೆಯುತ್ತಿದೆ 138 ಸ್ಥಳಗಳಲ್ಲಿ ನಿವೇಶನ ದೊರಕಿರುವುದಿಲ್ಲ ನಿವೇಶನವನ್ನು ಖರೀದಿಸುವುದಕ್ಕೆ ಅವಕಾಶವಿರುವುದಿಲ್ಲ.

ಆ) ವರ್ತೂರು ವಿಧಾನ ಸಭಾ ಕ್ಷೇತ್ರದಲ್ಲಿ ಕೆಳಕಂಡ ಸ್ಥಳಗಳಲ್ಲಿ ವಿದ್ಯಾರ್ಥಿನಿಲಯಗಳಿರುತ್ತವೆ.

1. ಕೆ.ಆರ್.ಪುರಂ
2. ದೇವಸಂದ್ರ
3. ವೈಟ್‌ಫೀಲ್ಡ

ಎಲ್ಲಾ ಮೂರು ವಿದ್ಯಾರ್ಥಿನಿಲಯಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿವೆ.

ನಿವೇಶನಗಳು ದೊರಕದೆ ಇರುವುದರಿಂದ ಕಟ್ಟಡಗಳ ನಿರ್ಮಾಣಕ್ಕೆ ಹಣ ಮಂಜೂರಾಗಿರುವುದಿಲ್ಲ.

ವಿಷಯ:- ಹಾವೇರಿ ಸಹಕಾರಿ ಸಕ್ಕರೆ ಕಾರ್ಖಾನೆಯ ವ್ಯಾಪ್ತಿಯಲ್ಲಿ ಬೆಳೆದ ಕಬ್ಬು

37(225)

ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು):- ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) 1996-97ನೇ ಸಾಲಿನ ಹಂಗಾಮಿನಲ್ಲಿ ಹಾವೇರಿ ಸಕ್ಕರೆ ಕಾರ್ಖಾನೆಯ ವ್ಯಾಪ್ತಿಯಲ್ಲಿ ತಾಲ್ಲೂಕುವಾರು ಬೆಳೆದ ಕಬ್ಬಿನ ಕ್ಷೇತ್ರವೆಷ್ಟು;

ಆ) ಸದರಿ ಕಾರ್ಖಾನೆಯ ಕಬ್ಬು ಅರೆಯುವ ಕಾರ್ಯವನ್ನು ಎಂದಿನಿಂದ ಪ್ರಾರಂಭಿಸಿದೆ;

ಇ) 15-1-97ರವರೆಗೆ ಅರೆದ ಒಟ್ಟು ಕಬ್ಬಿನ ಸಾಮರ್ಥವೆಷ್ಟು ಹಾಗೂ 15-1-97ರವರೆಗೆ ಎಷ್ಟುದಿನ ಕಬ್ಬು ಅರೆಯಲಾಗಿದೆ?

ಶ್ರೀ ಉಮೇಶ್ ವಿ. ಕತ್ತಿ (ಸಕ್ಕರೆ ಸಚಿವರು):-

ಅ) ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಆ) ದಿನಾಂಕ 2-11-96 ರಂದು.

ಇ) ದಿನಾಂಕ 15-1-97 ರವರೆಗೆ 59 ದಿನಗಳಲ್ಲಿ ಒಟ್ಟು 1,06,216 ಟನ್‌ಕಬ್ಬನ್ನು ಅರೆಯಲಾಗಿದೆ.

ಅನುಬಂಧ

1996-97ನೇ ಸಾಲಿನ ಹಂಗಾಮಿನಲ್ಲಿ ಹಾವೇರಿ ಸಕ್ಕರೆ ಕಾರ್ಖಾನೆಯ ವ್ಯಾಪ್ತಿಯಲ್ಲಿ ತಾಲ್ಲೂಕುವಾರು ಬೆಳೆದ ಕಬ್ಬಿನ ಕ್ಷೇತ್ರ.

	ತಾಲ್ಲೂಕು	ಕಬ್ಬಿನ ಕ್ಷೇತ್ರ ಏಕ್ರೆ	ಕಬ್ಬಿನ ಉತ್ಪಾದನೆ ಮೆ. ಟನ್
1.	ಹಾವೇರಿ	2242	49,000
2.	ಹಾನಗಲ್	5765	1, 17,888
3.	ಹಿರೇಕೆರೂರು	864	18,500
4.	ಬ್ಯಾಡಗಿ	755	13,600
5.	ಶಿಗ್ಗಾಂವ್	995	17,500
6.	ಸವಣೂರು	86	1,500
7.	ಶಿರಹಟ್ಟಿ	82	1,350
8.	ಕುಂದಗೋಳ	35	600
9.	ಹುಬ್ಬಳ್ಳಿ	306	6, 100
10.	ಧಾರವಾಡ	1149	21,300
11.	ಕಲಘಟಗಿ	744	11, 100
12.	ಮುಂದಗೋಡ್	111	1,780
13.	ಹಳಿಯಾಳ	221	4,000
14.	ಸಿರ್ಸಿ	45	770
15.	ರೋಣ	130	2, 100

ವಿಷಯ:- ಮಾಗಡಿ ತಾಲ್ಲೂಕಿನಲ್ಲಿ ಅಂಬೇಡ್ಕರ್ ಭವನ, ಸಮುದಾಯ ಭವನ ನಿರ್ಮಾಣ ಕುರಿತು.

38(314)

ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ):- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಮಾಗಡಿ ತಾಲ್ಲೂಕಿನಲ್ಲಿ ಅಂಬೇಡ್ಕರ್ ಭವನ ಹಾಗೂ ಸಮುದಾಯ ಭವನ ನಿರ್ಮಿಸುವ ಪ್ರಸ್ತಾಪ ಸರ್ಕಾರದವರ ಪರಿಶೀಲನೆಯಲ್ಲಿದೆಯೇ;